ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1332
ಸದಸ್ಯರ ಹೆಸರು	:	ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ	:	09-03-2022
ಉತ್ತರಿಸುವ ಸಚಿವರು	:	ಲೋಕೋಪಯೋಗಿ ಸಚಿವರು

ಪ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಷ್ಟ್ರೀಯ ಹೆದ್ದಾರಿ-66 ರ ಯಾವ ಭಾಗದಿಂದ ಉಡುಪಿಯಿಂದ ಬರುವ ಪ್ರಯಾಣಿಕರಿಗೆ ಕುಂದಾಪುರ ನಗರಕ್ಕೆ ಪ್ರವೇಶವನ್ನು ಕಲ್ಪಿಸಲಾಗಿದೆ; ಈ ಭಾಗದಲ್ಲಿ ನಗರ ಪ್ರವೇಶ ದ್ವಾರವನ್ನು ನಿರ್ಮಿಸದಿರುವುದರಿಂದ ಪ್ರಯಾಣಿಕರು ನಗರ ಪ್ರವೇಶಿಸಲು ಗೊಂದಲಕ್ಕೀಡಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;	ರಾಷ್ಟ್ರೀಯ ಹೆದ್ದಾರಿ-66 ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರವರ ಸುಪರ್ದಿಯಲ್ಲಿದ್ದು ಸದರಿ ಹೆದ್ದಾರಿಯ ಮುಖಾಂತರ ಕುಂದಾಪುರ ನಗರಕ್ಕೆ ಪ್ರವೇಶ ಕಲ್ಪಿಸುವ ಕುರಿತು ಈ ಕೆಳಕಂಡಂತೆ ವರದಿಯನ್ನು ಸಲ್ಲಿಸಿರುತ್ತಾರೆ. • ರಾಷ್ಟ್ರೀಯ ಹೆದ್ದಾರಿ-66ರ ಕಿ.ಮೀ.283.300 ಮತ್ತು ಕಿ.ಮೀ.285.550 ರಲ್ಲಿ ಕುಂದಾಪುರ ನಗರಕ್ಕೆ ಪ್ರವೇಶ ಮತ್ತು ನಿರ್ಗಮನಕ್ಕಾಗಿ ಸರ್ವೀಸ್ ರಸ್ತೆ ಮಧ್ಯದ ತೆರೆಯುವಿಕೆಗಳನ್ನು ಒದಗಿಸಲಾಗಿದೆ. • ಇದಲ್ಲದೆ, ಸದರಿ ಹೆದ್ದಾರಿಯ ಕಿ.ಮೀ.284.530 RHS ರಲ್ಲಿ ಕುಂದಾಪುರ ನಗರಕ್ಕೆ ಪ್ರವೇಶ ಕಲ್ಪಿಸಲು ಸ್ಥಳೀಯರ ಕೋರಿಕೆಯ ಮೇರೆಗೆ ಸ್ಥಳವನ್ನು ಪರಿಶೀಲಿಸಲಾಗಿ ಈ ಸ್ಥಳದಲ್ಲಿ Acceleration & Deceleration ಪಥ ಇಲ್ಲದಿರುವುದರಿಂದ ವಾಹನಗಳ ಸುಗಮ ಪ್ರವೇಶ ಹಾಗೂ ನಿರ್ಗಮನಕ್ಕೆ ತೊಂದರೆಯಾಗುತ್ತದೆ. ಅಲ್ಲದೆ, ಸದರಿ ಭಾಗವು ಕಣಿವೆಯ ಭಾಗವಾಗಿದ್ದು, ಈ ಭಾಗದಲ್ಲಿ ಸರ್ವೀಸ್ ರೋಡ್ ಮೀಡಿಯನ್ ನಿರ್ಮಿಸಿದ್ದಲ್ಲಿ ವಾಹನಗಳು ಹೆಚ್ಚಿನ ವೇಗದಲ್ಲಿ ಸಂಚರಿಸುವ ಕಾರಣ ರಸ್ತೆ ಅಪಘಾತಗಳು ಸಂಭವಿಸುವ ಸಾಧ್ಯತೆಯಿದ್ದು ಕಪ್ಪು ಸ್ಥಳ ಉಂಟಾಗುವ ಸಂಭವವಿರುತ್ತದೆ. • ಈ ಎಲ್ಲಾ ತೊಂದರೆಗಳನ್ನು ಬಗೆಹರಿಸಲು ಸರ್ವೀಸ್ ರಸ್ತೆಯಲ್ಲಿ ವಾಹನಗಳ ಆಗಮನಕ್ಕಾಗಿ ಪ್ರವೇಶ ಕಲ್ಪಿಸಲಾಗಿದೆ.
ಆ)	ರಾಷ್ಟ್ರೀಯ ಹೆದ್ದಾರಿ-66 ರಲ್ಲಿ ನಿರ್ಮಿಸಲಾದ ಫ್ಲೈ ಓವರ್ ಗಳು ಯಾವುವು; ಹೆದ್ದಾರಿಯ ಈ ಫ್ಲೈ ಓವರ್‌ನಿಂದ ಮಳೆಗಾಲದಲ್ಲಿ ನೀರು ನೇರವಾಗಿ ಸರ್ವಿಸ್ ರಸ್ತೆಗೆ ಬೀಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸರ್ವೀಸ್ ರಸ್ತೆಯಿಂದ ನೀರು ಚರಂಡಿಗೆ ಹರಿಯದೇ	ರಾಷ್ಟ್ರೀಯ ಹೆದ್ದಾರಿ-66 ರಲ್ಲಿ ಈ ಕೆಳಕಂಡ ಫ್ಲೈ ಓವರ್‌ಗಳನ್ನು ನಿರ್ಮಿಸಲಾಗಿದೆ. 1. ಬಾಳೆಗುಳಿ ಫ್ಲೈ ಓವರ್ 133.825 ಕಿ.ಮೀ.ರಲ್ಲಿ 2. ಕುಂದಾಪುರ ಫ್ಲೈ ಓವರ್ 284.00 ಕಿ.ಮೀ.ರಲ್ಲಿ 3. ತೊಕ್ಕೊಟ್ಟು ಫ್ಲೈ ಓವರ್ 9.676 ಕಿ.ಮೀ.ರಲ್ಲಿ 4. ಪಂಪ್ ವೆಲ್/ಮಹಾವೀರ್ ಸರ್ಕಲ್ ಫ್ಲೈ ಓವರ್ 3.750 ಕಿ.ಮೀ.ರಲ್ಲಿ 5. ಸೂರತ್‌ಕಲ್ ಫ್ಲೈ ಓವರ್ 360.425 ಕಿ.ಮೀ.ರಲ್ಲಿ 6. ಕುಲ್ಲೂರು ಫ್ಲೈ ಓವರ್ 368.775 ಕಿ.ಮೀ.ರಲ್ಲಿ 7. ಕೊಟ್ಟಾರ ಫ್ಲೈ ಓವರ್ 370.300 ಕಿ.ಮೀ.ರಲ್ಲಿ 8. ಕುಂತಿಕನ್ ಫ್ಲೈ ಓವರ್ 371.950 ಕಿ.ಮೀ.ರಲ್ಲಿ

PTO

	ರಸ್ತೆಗಳು ಬ್ಲಾಕ್ ಆಗುತ್ತಿರುವುದರ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು;	ಮೇಲ್ಕಂಡ ಫ್ಲೈ ಓವರ್ ಗಳಲ್ಲಿ ಮಳೆ ನೀರನ್ನು ಹೊರಹಾಕಲು ಮಳೆನೀರಿನ ಡೌನ್ ಪೈಪ್ ಗಳನ್ನು ಈ ಕೆಳಕಂಡ ಫ್ಲೈ ಓವರ್‌ಗಳನ್ನು ಹೊರತುಪಡಿಸಿ ಅಳವಡಿಸಲಾಗಿರುತ್ತದೆ. 1. ಕುಂದಾಪುರ ಫ್ಲೈ ಓವರ್ 284.00 ಕಿ.ಮೀ.ರಲ್ಲಿ 2. ತೊಕ್ಕೊಟ್ಟು ಫ್ಲೈ ಓವರ್ 9.676 ಕಿ.ಮೀ.ರಲ್ಲಿ 3. ಪಂಪ್ ವೆಲ್/ಮಹಾವೀರ್ ಸರ್ಕಲ್ ಫ್ಲೈ ಓವರ್ 3.750 ಕಿ.ಮೀ.ರಲ್ಲಿ ಈ ಮೇಲಿನ 3 ಫ್ಲೈ ಓವರಗಳಲ್ಲಿ ಮಳೆ ನೀರು ಹೊರಹಾಕಲು ಮಳೆನೀರಿನ ಡೌನ್ ಪೈಪ್‌ಗಳನ್ನು ಅಳವಡಿಸುವ ಕಾರ್ಯ ಪ್ರಗತಿಯಲ್ಲಿದ್ದು, ಶೀಘ್ರದಲ್ಲಿ ಪೂರ್ಣಗೊಳಿಸಲಾಗುವುದು ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ.
ಬ)	ಕುಂದಾಪುರ ಪುರಸಭಾ ವ್ಯಾಪ್ತಿಯಲ್ಲಿ ಫ್ಲೈ ಓವರ್ ಕೆಳಭಾಗದಲ್ಲಿ ಪಾರ್ಕಿಂಗ್‌ಗೆ ಮತ್ತು ಉದ್ಯಾನವನ ನಿರ್ಮಾಣದ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳಾವುವು? ಹೆದ್ದಾರಿಯ ನಿಧಾನ ಗತಿಯ ಕಾಮಗಾರಿಯಿಂದ ಪುರಸಭೆಯ ಪ್ರಮುಖ ಸ್ಥಳವಾದ ಶಾಸ್ತ್ರೀ ಸರ್ಕಲ್ ಕಳಾಹೀನವಾಗಿರುವುದರ ಬಗ್ಗೆ ಸಾರ್ವಜನಿಕ ಆಕ್ರೋಶ ವ್ಯಕ್ತವಾಗುತ್ತಿದ್ದು, ಇದಕ್ಕೆ ಸರ್ಕಾರ ಕೈಗೊಂಡ ಪರಿಹಾರ ಕ್ರಮಗಳೇನು?	ಫ್ಲೈ ಓವರ್‌ಗಳ ಕೆಳಗೆ ಗಿಡಗಳನ್ನು ನೆಡಬಹುದಾಗಿದ್ದು, ಈ ಕಾರ್ಯವನ್ನು Corporate Social Responsibility Activities ವತಿಯಿಂದ ಕೈಗೊಳ್ಳಲು ಕ್ರಮ ವಹಿಸಲಾಗುತ್ತದೆ. ಆದರೆ ವಾಹನಗಳ ಪಾರ್ಕಿಂಗ್‌ಗಾಗಿ ಫ್ಲೈ ಓವರ್‌ಗಳ ಕೆಳಭಾಗದಲ್ಲಿ ವ್ಯವಸ್ಥೆ ಕಲ್ಪಿಸಲಾಗಿರುವುದಿಲ್ಲ. ಕುಂದಾಪುರ ನಗರ ಭಾಗದಲ್ಲಿ ಈಗಾಗಲೇ ಫ್ಲೈ ಓವರ್, ವಿಯುಪಿ ಹಾಗೂ ಪಿಯುಪಿ ಗಳನ್ನು ನಿರ್ಮಾಣ ಮಾಡಲಾಗಿದೆ. ಗುತ್ತಿಗೆದಾರರ ಆರ್ಥಿಕ ಮುಗ್ಗಟ್ಟಿನಿಂದ ಒಳಚರಂಡಿ ನಿರ್ಮಾಣ ಹಾಗೂ ಉಳಿಕೆ ಕಾಮಗಾರಿಗಳು ನಿಧಾನ ಗತಿಯಲ್ಲಿ ಸಾಗುತ್ತಿದ್ದು, ಗುತ್ತಿಗೆದಾರರಿಂದ ಉಳಿಕೆ ಕಾಮಗಾರಿಯನ್ನು ಕೈಗೊಳ್ಳಲು ಕಾರ್ಯಕ್ರಮ ಪಟ್ಟಿಯನ್ನು ನೀಡಿದ್ದು, ಅದರಂತೆ ನಿರಂತರವಾಗಿ ಮೇಲ್ವಿಚಾರಣೆ ಮಾಡಲಾಗುತ್ತಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ.

ಕಡತ ಸಂಖ್ಯೆ: ಲೋಇ 93 ಸಿಎನ್‌ಹೆಚ್ 2022 (ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು